

ನಡೆಯಲಾಗದೆ ಒದ್ದಾಡುತ್ತಿದೆ ಎಂದು ಗೊತ್ತಾದರೆ, ವೀರಂಜಯ ಹೆಗ್ಡೆಯವರು ಖುದ್ದು ಹೋಗಿ ಅದನ್ನು ತಂದು ಆರೈಕೆ ಮಾಡುತ್ತಾರೆ.

ಎರಡು ತಿಂಗಳಿಗೊಮ್ಮೆ ನಿಟ್ಟೆಯಿಂದ ಪಶುವೈದ್ಯ ಡಾ. ವಾಸುದೇವ ಪೈಯವರು ತಮ್ಮ ತಂಡದ ಆರು ಮಂದಿ ವೈದ್ಯರೊಂದಿಗೆ ಬರುತ್ತಾರೆ. ಇಲ್ಲಿ ನಿರ್ಮಿಸಲಾಗಿರುವ ಆಪರೇಷನ್ ಥಿಯೇಟರ್‌ನಲ್ಲಿ ಹೆಣ್ಣುನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಿಹೋಗುತ್ತಾರೆ. 'ಇದು ಸೇವಾ ಮನೋಭಾವದ ಕೊಡುಗೆ, ಬಿಡಿಗಾಸಿನ ಪ್ರತಿಫಲವೂ ಬೇಡ' ಎನ್ನುವ ಮೂಲಕ ವೀರಂಜಯ ಹೆಗ್ಡೆ ಕೈಗೊಂಡ ಸತ್ಕಾರ್ಯದಲ್ಲಿ ಭಾಗಿಯಾಗುತ್ತಾರೆ. ಇದರಿಂದಾಗಿ ಇಲ್ಲಿರುವ ನಾಯಿಗಳ ವಂಶಾಭಿವೃದ್ಧಿಯಾಗುವ ಭಯ ದೂರವಾಗಿದೆ.

ನಾಯಿ ಮನೆಗೆ ಯಾರು ಬೇಕಿದ್ದರೂ ಅನಾಥ ನಾಯಿಗಳನ್ನು ತಂದುಕೊಡಬಹುದು. ಊರ ನಾಯಿಗಳ ಜೊತೆಗೆ ಭಿನ್ನ ತಳಿಯ ಕೆಲವು ನಾಯಿಗಳು ಇಲ್ಲಿಗೆ ಬಂದಿವೆ. ಆದರೆ ತಂದುಕೊಡುವ ನಾಯಿ ಮರಿಗಳಿಗೆ ರೇಬಿಸ್ ಲಸಿಕೆ ಹಾಕಿಸಿ ತರಬೇಕು. ಅದಲ್ಲವಾದರೆ ಲಸಿಕೆ ಹಾಕಿಸುವ ವೆಚ್ಚ (ಸುಮಾರು ಏಳುನೂರು ರೂಪಾಯಿ) ಕೊಡಬೇಕು. ಇಲ್ಲಿರುವ ನಾಯಿಗಳನ್ನು ಇಷ್ಟವಿದ್ದವರು ದತ್ತು ಸ್ವೀಕರಿಸಬಹುದು. ಮನೆಯಲ್ಲಿ ಪ್ರೀತಿಯಿಂದ ಸಾಕುತ್ತೇವೆ ಎಂದವರಿಗೆ ಯಾವ ನಿರ್ಬಂಧವೂ ಇಲ್ಲದೆ ಉಚಿತವಾಗಿ ಕೊಟ್ಟುಬಿಡುತ್ತಾರೆ. ಆಮೇಲೆ ಅವರಿಗೆ ಅದು ಬೇಡವೆನಿಸಿ ಮರಳಿ ತಂದುಕೊಡುತ್ತೇನೆ ಎಂದರೂ ಬೇಡ ಎಂದು ತಡೆಯುವ ಮಾತಿಲ್ಲ.

ಅನಾಥ ನಾಯಿಗಳ ಪೋಷಣೆಗೆ ಕಡಿಮೆ ಎಂದರೂ ದಿನಕ್ಕೆ ಐದು ಸಾವಿರಕ್ಕಿಂತ ಹೆಚ್ಚು ಖರ್ಚು ಬರುತ್ತದೆ. ನಾಯಿಗಳ ಸಂಖ್ಯೆ ಏರಿದಂತೆ ಖರ್ಚು ವೆಚ್ಚಗಳೂ ಏರುತ್ತಿವೆ. ಪ್ರಾಣಿ ಸಂರಕ್ಷಣೆಯ ದೃಷ್ಟಿಯಿಂದಲೇ ಮಾಡಿರುವ 'ಅಹಿಂಸಾ ಅನಿಮಲ್ ಕೇರ್ ಟ್ರಸ್ಟ್'ನಲ್ಲಿ ಅವರದೇ ಸೇವಾ ಮನೋಭಾವದ ಸದಸ್ಯರೂ ಜತೆಗೂಡಿದ್ದಾರೆ. ತನ್ನ ಆಶೋತ್ತರಗಳ ನಿರ್ವಹಣೆಗೆ ಶಾಶ್ವತ ನಿಧಿ ಮಾಡುವ ಆಕಾಂಕ್ಷೆಯೂ ವೀರಂಜಯ ಹೆಗ್ಡೆಯವರಲ್ಲಿದೆ.


ವೀರಂಜಯ ಹೆಗ್ಡೆ

2021ರ ಸ್ವಾತಂತ್ರ್ಯ ದಿನೋತ್ಸವದಂದು ನಾಯಿಮನೆಯ ಉದ್ಘಾಟನೆಯೂ ನಡೆದಿದೆ. ಇವರ ಕೈಂಕರ್ಯ ಕಂಡು ಖುಷಿಯಾದವರು, ಕಬ್ಬಿಣದ ಸರಳುಗಳಿರುವ ಮೂವತ್ತಕ್ಕಿಂತ ಹೆಚ್ಚು ಪಂಜರಗಳನ್ನು ದಾನವಾಗಿ ಕೊಟ್ಟಿದ್ದಾರೆ. ಗೂಡುಗಳಲ್ಲಿ ಜಾಗ ಸಾಲದೆ ಹೋದಾಗ ವಿಶಾಲವಾದ ಕಟ್ಟಡಗಳಲ್ಲೇ ಕಟ್ಟಿ ಹಾಕಿ, ಮಲಗಿಕೊಳ್ಳಲು ಮರದ ಮಂಚಗಳನ್ನು ಹಾಕಿಕೊಟ್ಟರು.

ರಾತ್ರಿ ನಾಯಿಗಳಿಗೆ ಬಂಧನವಿಲ್ಲ. ಆವರಣದ ಒಳಗೆ ಮುಕ್ತವಾಗಿ ತಿರುಗಾಡಬಹುದು. ನಾಲ್ಕು ಮಂದಿ ಕೆಲಸಗಾರರು ಅವುಗಳಿಗೆ ಸ್ನಾನ ಮಾಡಿಸುವುದು, ಗೂಡುಗಳನ್ನು ನೀರಿನಿಂದ ತೊಳೆದು ಸ್ವಚ್ಛಗೊಳಿಸುವುದು, ಆರೋಗ್ಯ ಕೆಟ್ಟಿದ್ದರೆ ವೈದ್ಯರಿಗೆ ಕರೆ ಮಾಡುವುದು – ಈ ಕೆಲಸಗಳನ್ನು ಮಾಡುತ್ತಾರೆ. ಇವುಗಳ ಆಹಾರ ತಯಾರಿಕೆಗೆ ಪ್ರತ್ಯೇಕ ಒಲೆ ಮತ್ತು ಪಾತ್ರೆಗಳಿವೆ. ಸದ್ಯಕ್ಕೆ 260 ನಾಯಿಗಳಿವೆ. ಇವುಗಳಲ್ಲಿ ನಾಲ್ಕೋ ಐದೋ ಗಂಡಿರಬಹುದು, ಉಳಿದವೆಲ್ಲ ಹೆಣ್ಣುಗಳು. ಅಪಘಾತದಿಂದ ಕಾಲೋ ಕೈಯೋ ಕಳೆದುಕೊಂಡ ನಾಯಿಗಳು 18ರಷ್ಟಿವೆ. 12 ನಾಯಿಗಳಿಗೆ ಚರ್ಮರೋಗವಿದೆ. 20 ನಾಯಿಗಳಿಗೆ ಕ್ಯಾನ್ಸರ್ ಇದೆ.

ಎಲ್ಲೋ ನಾಯಿಗೆ ಅಪಘಾತವಾಗಿದೆ,

ಏಕವ್ಯಕ್ತಿ ಸಾಹಸ ಮಾಡುತ್ತಿರುವ ಹೆಗ್ಡೆಯವರಿಗೆ ಕಟ್ಟಡಗಳ ನಿರ್ಮಾಣದಿಂದ ಆರಂಭಿಸಿ, ನಾಯಿಗಳ ದಿನದ ಊಟದ ತನಕ ಆರ್ಥಿಕ ನೆರವನ್ನು ಒದಗಿಸಿ ಬೆನ್ನು ತಟ್ಟಿದ ದಾನಿಗಳು ಹಲವರಿದ್ದಾರೆ. 'ಅಹಿಂಸಾ ಟ್ರಸ್ಟ್‌ನ ಫೇಸ್‌ಬುಕ್ ಪೇಜ್ ಇದೆ. ಅದನ್ನು ಫಾಲೋ ಮಾಡಿ, ನಿಮ್ಮ ಗೆಳೆಯರೊಂದಿಗೂ ಹಂಚಿಕೊಳ್ಳಿ. ಒಬ್ಬರು ಒಂದು ನಾಯಿಗೆ ಒಂದು ದಿನದ ಊಟ ಕೊಡಿ, ಇದರಿಂದ ನನ್ನ ಹೆಗಲ ಮೇಲಿರುವ ಈ ಸಂರಕ್ಷಣೆಯ ಭಾರವನ್ನು ನೀವೂ ಹಂಚಿಕೊಂಡಂತೆ ಆಗುತ್ತದೆ' ಎಂದು ಹೆಗ್ಡೆ ಮನವಿ ಮಾಡುತ್ತಾರೆ.

**ಅಹಿಂಸಾ ಟ್ರಸ್ಟ್ ಸಂಪರ್ಕ ಸಂಖ್ಯೆ: 9611944763**

ಪ್ರತಿಕ್ರಿಯಿಸಿ: feedback@sudha.co.in